


## ಹೃದಯಸ್ಪರ್ಶಿ ಲೇಖನ

'ಅಮ್ಮ ಮತ್ತು ಮಗಳು' ಸುನಂದಾ ಕಡಮೆ ಅವರ ಮುಖಪುಟ ಲೇಖನ ಹೃದಯಸ್ಪರ್ಶಿಯಾಗಿತ್ತು.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಸುನಂದಾ ಹಾಲಬಾವಿ, ಕೋಟೇಶ್ವರ ಸೂರ್ಯ ನಾರಾಯಣ ರಾವ್, ಜಿ.ಕೆ.ಶ್ರೀಮತಿ, ಬಿ.ಎಸ್.ರಮೇಶ್, ಬೆಂಗಳೂರು/ ವಿಭಾ ಮುರಳೀಧರ್, ತುಮಕೂರು/ ಟಿ.ಎನ್.ಸರಸ್ವತಿ, ತಿಪಟೂರು

## ಮಿತಿ!

'20'ರ ಚೆಲುವೆ ಪ್ರಜ್ಞಾ!' ಕುಮಾರವ್ಯಾಸ ಪಾಂಡುವನ್ನು ಕುರಿತು 'ಪ್ರಜ್ಞಾ ಸಾಗರಂಗಳು ಮಧ್ಯಕಟಿ ಜಾನ್ವಂಘ್ರಿ ಮಿತವಾಯ್ತು' ಎನ್ನುತ್ತಾನೆ. ಸಿನಿಮಾ ತಾರೆಯರ (ಮತ್ತು ಇನ್ನೂ ಕೆಲವು ವರ್ಗಗಳ ಕಾಮಿನಿಯರ) ಬಗೆಗೆ, ಪ್ರಜ್ಞೆ 'ನಾಭಿಮಿತವಾಯ್ತು!' ಎನ್ನಬೇಕಾಗುತ್ತದೆ!

-ಸಿಪಿಕೆ, ಮೈಸೂರು

## ಮನನೀಯ ಮಾತು

'ಮಾತೇ ಮುತ್ತು' ಅಂಕಣದಲ್ಲಿ ಪ್ರಕಟವಾಗಿರುವ ಸಾವಿನ ಹೆದರಿಕೆ ಕುರಿತು 'ವೈರಾಗ್ಯ ಶತಕ'ದ ಮಾತು ಮನನೀಯ; ನಿತ್ಯವೂ ಧ್ಯಾನಿಸಬೇಕಾದ್ದು.

-ಎಸ್. ಚನ್ನಪ್ಪ, ಮೈಸೂರು

## ಅರ್ಥಪೂರ್ಣ ವಿಚಾರ

ವಿಚಾರ ಲಹರಿಯಲ್ಲಿ 'ಹೆಂಡತಿಯೆಂಬ ತಾಯಿ!' ಶಿಕಾಕು ಲೇಖನ ಬಹಳ ಬಹಳ ಅರ್ಥಪೂರ್ಣ.

-ಎಂ.ಎಲ್. ಲಕ್ಷ್ಮಣ್‌ರಾವ್, ದಾವಣಗೆರೆ/ ಶ್ರೀನಾಥ ಕೊನೇಟಿ, ಬೆಂಗಳೂರು

## ಸುಂದರ ಲೇಖನ

'ಮರಳುಗಾಡಿನ ಸ್ವರ್ಗ' ವಿದ್ಯಾ ವಿ. ಹಾಲಭಾವಿ ಲೇಖನ ಸುಂದರವಾಗಿತ್ತು.

-ರವೀಂದ್ರನಾಥ. ಶಿ. ಯಡಹಳ್ಳಿ, ಬೀಳಗಿ

## ಮಾಂತ್ರಿಕ ಬರಹ, ಟಾಪ್ ಅಂಕಣ

ಅಲೇಖರ 'ಮಾಂತ್ರಿಕ ಮೆಸ್ಸಿ' ಲೇಖನ ನಿಜಕ್ಕೂ ಓದಿಸಿಕೊಂಡು ಹೋಯಿತು.

ಪತ್ತೇದಾರಿ ಕಥೆ, ಧಾರಾವಾಹಿಗಳನ್ನು ಹೆಚ್ಚಾಗಿ ಪ್ರಕಟಿಸಿ. ನೀವು ಕೇಳಿದಿರಿ ಅಂಕಣ 'ಸುಧಾ' ಪತ್ರಿಕೆಯ ಟಾಪ್ ಅಂಕಣ.

-ವಾಸುಕಿ ಸಿ.ಜಿ., ಸಿರ್ಸಿ

## ಮಲೆನಾಡಿಗೆ ಸವಾಲು

ಆನಂದತೀರ್ಥ ಪ್ಯಾಟಿ ಚಿತ್ರಲೇಖನ 'ಕೊಂಬಾವರಂ ಕಂಡಿರಾ?' ಮಲೆನಾಡಿಗೆ ಸವಾಲೆಸೆಯುವ ಬರಗಾಲದ ಚೆಂಬೋಳಿಯ ಪ್ರಕೃತಿ ಸೌಂದರ್ಯ ಮನಸೆಳೆಯಿತು.

-ಎಂ. ಮಲ್ಲಯ್ಯ, ಶ್ರೀರಾಂಪುರ/ ಬಿ.ಎಸ್.ಪಾಟೀಲ, ವಾಡಿ/ ಬಸವರಾಜ ಕಡೇಮನಿ, ಆಳಂದ

## ಆಕರ್ಷಕ ಕಥೆ

ಎನ್.ಶೈಲಜಾ ಹಾಸನ ಅವರ 'ಮೈ ಡಿಯರ್ ಡೈರಿ' ಒಂದು ವಿಭಿನ್ನ ಕಥೆ. ಆಕರ್ಷಕವಾಗಿ ಓದಿಸಿಕೊಂಡ ಕುತೂಹಲಕಾರಿ ಕಥೆ.

-ಎಚ್. ಆನಂದ್ ಕುಮಾರ್, ಚಿತ್ರದುರ್ಗ/ ಕೊಹಿಮ, ಬಸರಕೋಡು/ ಪದ್ಮಜಾರಾವ್, ಮೈಸೂರು

## ಪ್ರಸಾರವಾದ ಕಥೆ

'ಮೈ ಡಿಯರ್ ಡೈರಿ' ಕಥೆ ಹೋಲುವ 'ಮೈ ಡೈರಿ' ಕಾರ್ಯಕ್ರಮ ಟಿವಿ-9 ಚಾನೆಲ್‌ನಲ್ಲಿ ಕೆಲವು ತಿಂಗಳ ಹಿಂದೆ ಪ್ರಸಾರವಾಗಿತ್ತು.

-ಕೆ.ಮಂಜುಳಾ, ಪ್ರದೀಪ್ ಕಶ್ಯಪ್, ಬೆಂಗಳೂರು

## ಹೆಸರು, ಸನ್ನಿವೇಶ ಬದಲು

ಹೌದು. ಇದೊಂದು ನೈಜ ಘಟನೆ ಎಂದು ಟಿವಿ-9 ಪ್ರಸಾರ ಮಾಡಿತ್ತು. ಕಥೆ ಬರೆಯಲು ನನಗೆ ಅದೇ ಪ್ರೇರಣೆ. ಒಬ್ಬ ಕಥೆಗಾರ್ತಿಯಾಗಿ ಹೆಸರು, ಸನ್ನಿವೇಶಗಳನ್ನು ಬದಲಿಸಿದ್ದೇನೆ. ವಸ್ತುವಿನಲ್ಲೂ ಸ್ವಲ್ಪ ಬದಲಾವಣೆ ಇದೆ. ಸಮಾಜದಲ್ಲಿ ನಡೆಯುವ ಘಟನೆಗಳು ಪತ್ರಿಕೆ, ಟಿವಿಯಲ್ಲಿ ಪ್ರಸಾರವಾದಾಗ ಕಥೆ ಬರೆಯಲು ಪ್ರೇರೇಪಿಸುತ್ತವೆ.

-ಎನ್.ಶೈಲಜಾ ಹಾಸನ

## ಕುತೂಹಲಕಾರಿ ಕಥೆ

ಶೇಷನಾರಾಯಣರ ಕಥೆ 'ಭಗವಂತನ ಲೀಲೆ' ಕುತೂಹಲದಿಂದ ಓದಿಸಿಕೊಂಡು ಹೋಯಿತು.

-ಪಿ.ಎನ್. ಶ್ರೀವತ್ಸ, ಬೆಂಗಳೂರು

## ಅಪ್ರಸ್ತುತ ಕಥೆ

'ಭಗವಂತನ ಲೀಲೆ' ಕಥೆ ವಸ್ತು ಪುರಾತನ ಕಾಲದ 'ಸಹಗಮನ' ಪದ್ಧತಿಯ ಕುರಿತಾದದ್ದು. ನಂಬಲಸಾಧ್ಯವಾದ ಇದು, ಈಗಿನ ಕಾಲಕ್ಕೆ ಅಪ್ರಸ್ತುತ. ಓಬೀರಾಯನ ಕಾಲದ ಅಸಹಜ ಕಥೆ ಓದಿ ನಿರಾಶೆಯಾಯಿತು. ರಾಜಕೀಯ ಪಕ್ಷದ ವಿಡಂಬನೆ ಅನಗತ್ಯವಾಗಿತ್ತು.

-ಸಿ.ಎಸ್. ಗೋಪಾಲಕೃಷ್ಣ, ಮೈಸೂರು/ ನಳಾನುಜ, ಬೆಂಗಳೂರು/ ತರಂಗಿಣಿ, ತುಮಕೂರು




ನೋಡಿ, ರೋಗಿಯನ್ನು ಉಳಿಸೋಕೆ ನೀವು ಶಕ್ತಿ ಮೀರಿ ಖರ್ಚು ಮಾಡೋದಾದ್ರೆ ನಾನು ಶಕ್ತಿ ಮೀರಿ ಪ್ರಯತ್ನ ಮಾಡ್ತೇನೆ.




ಉತ್ಸವ ಸಮಿತಿಯಲ್ಲೂ ಈ ವರ್ಷ ಎರಡು ಬಣಗಳಾಗಿವೆಯಂತೆ. ಅದಕ್ಕೆ ಎಳೆದಾಡುತ್ತಿದ್ದಾರೆ..?

## ಮನಸೆಳೆದ 'ಕಾಕಿಗಿಡ'

ವಸುಮತಿ ಉಡುಪರ 'ಕಾಕಿಗಿಡ' ಧಾರಾವಾಹಿ ಆಕರ್ಷಕ ಶೈಲಿಯಿಂದಾಗಿ ಮನಸೆಳೆಯಿತು.



ಸಮಸ್ಯೆಗಳು ಬಂದಾಗ ಅದನ್ನು ಧೃತಿಗೆಡದೆ ಪರಿಹರಿಸಿಕೊಳ್ಳುವ ಪಾಠ ಇದರಲ್ಲಿದೆ.

-ಕವಿತಾ ಹೆಬ್ಬಾರ್, ಬೆಳ್ಳಾವೆ ರಮೇಶ್, ಬೆಂಗಳೂರು/ ಎಸ್.ಪಿ.ಧನಲಕ್ಷ್ಮಿ, ಮೈಸೂರು/ಎನ್. ಶೈಲಜಾ ಹಾಸನ

## ತ್ರಿವೇಣಿಯ 'ಅವಳ ನೆನಪು'

ಧಾರಾವಾಹಿ ಓದಿದಾಗ ತ್ರಿವೇಣಿಯವರ 'ಅವಳ ಮನೆ' ಕಾದಂಬರಿಯ 'ಸರೋಜಿನಿ' ನೆನಪಾದಳು. ಅವಳು ತನ್ನದಾದ ಮನೆ ಬೇಕು ಎಂದು ಹಂಬಲಿಸಿದರೆ, ನಳಿನಿ ತನ್ನ ಕಾಲಮೇಲೆ ತಾನು ನಿಲ್ಲಬೇಕೆಂದು ಬಯಸುತ್ತಾಳೆ. ಇದು ಬದಲಾದ ಕಾಲದ ಯುವತಿಯರ ಮನೋಧರ್ಮವನ್ನು ಸೂಚಿಸುತ್ತದೆ.

-ಎಲ್. ಸ್ವರ್ಣಲತಾ,ಹುಬ್ಬಳ್ಳಿ/ಪ್ರಭಾ ಪ್ರಸಾದ್, ಬೆಂಗಳೂರು

## ಅವಸರದ ಮುಕ್ತಾಯ

'ಕಾಕಿಗಿಡ' ಧಾರಾವಾಹಿಯ ವಸುಮತಿ ಉಡುಪರ ನಿರೂಪಣೆ ಅತ್ಯದ್ಭುತವಾಗಿತ್ತು. ಕತೆ ವಾಸ್ತವಕ್ಕೆ ತುಂಬ ಹತ್ತಿರವಾದಂತಿತ್ತು. ಧಾರಾವಾಹಿಯನ್ನು ಅವಸರದಲ್ಲಿ ಮುಗಿಸಿದ್ದು ಬೇಸರವಾಯ್ತು.

-ಎಂ.ಸಿ. ನಾಗರತ್ನ, ಶಿವಮೊಗ್ಗ/ ಸುಮತಿ ಕೃಷ್ಣರಾವ್, ತುಮಕೂರು

## ಕಾಕಿಗಿಡದಿಂದ ಜೀವ ಚೈತನ್ಯ

ಮೃಗೀಯ ದಾಳಿಯಿಂದ ಮೊಗ್ಗು ತತ್ತರಿಸಿದರೂ, ಬಾಲ್ಯದಿಂದಲೂ ಬಲ್ಲ ಕಾಕಿಗಿಡವನ್ನು ನೋಡಿ ಜೀವ ಚೈತನ್ಯ ತಂದುಕೊಳ್ಳುವುದು ನೆಮ್ಮದಿ ತಂದಿತು. ಮಲೆನಾಡಿನ ರಮ್ಯಭಾಷೆ ರಸದೌತಣ ನೀಡಿತು.

-ಕೆ. ಕೃಷ್ಣಕುಮಾರಿ, ಮಂಗಳೂರು/ ಸು. ವಿಜಯಲಕ್ಷ್ಮಿ ಶಿವಮೊಗ್ಗ/ ಸುನಂದಾ ಬೀಳಗಿ, ಧಾರವಾಡ